ದಿ.02.05.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು.

ಪಾಟೀ ಸವಾಲು: ಶ್ರೀ ಎಂ.ಕೆ., ವಕೀಲರಿಂದ ಅರ್ಜಿದಾರರ ಪರವಾಗಿ ಃ

9. ನಾನು ಕೆಪಿಟಿಸಿಎಲ್ ನಲ್ಲಿ 22 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಈಗ ನಾನು ಎಕ್ಸಿಕ್ಯೂಟಿವ್ ಇಂಜಿಯರ್ ಆಗಿ ಫೆಬ್ರುವರಿ, 2023 ರಿಂದ ಚನ್ನಗಿರಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ನಮಗೆ ಪಸ್ಟ್ ಪಾರ್ಟಿ ಅಂದರೆ ಕೆಪಿಟಿಸಿಎಲ್ ದಾವಣಗೆರೆ ಅಧೀಕ್ಷಕ ಇಂಜಿನಿಯರ್ ಮತ್ತು ಕಾಂಟ್ರಾಕ್ಟರ್ ರವರಿಗೆ ಸೆಕೆಂಡ್ ಪಾರ್ಟಿ ಯಾಗಿ ಮಾಡಲಾಗಿದೆ. ಈ ಪ್ರಕರಣದಲ್ಲಿ ಚನ್ನಗಿರಿ ವಿಭಾಗಕ್ಕೆ ಪಾರ್ಟಿಯನ್ನಾಗಿ ಮಾಡಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಚನ್ನಗಿರಿ ವಿಭಾಗ ನಮ್ಮ ನಿಯಂತ್ರಣದಲ್ಲಿ ಬರುತ್ತದೆ. ಮುಂದುವರೆದು ಜನವರಿ 2025 ರಿಂದ ಆಪರೇಷನ್ ಮತ್ತು ಪ್ರಾಜೆಕ್ಟ್ ಎಂಬುದಾಗಿ ಪ್ರತ್ಯೇಕವಾಗಿಗೊಂಡಿರುವುದರಿಂದ ಅಧೀಕ್ಷಕ ಅಭಿಯಂತರರು ಪ್ರಾಜೆಕ್ಟ್ ನೋಡಿಕೊಳ್ಳುತ್ತಿದ್ದಾರೆ ಮತ್ತು ಎಜಿಕ್ಯೂಟಿವ್ ಇಂಜಿಯರ್ ಅಫರೇಷನ್ ನ್ನು ನೋಡಿಕೊಳ್ಳುತ್ತಿದ್ದಾರೆ. ಈ ವಿಷಯವನ್ನು ನಾನು ನನ್ನ ಪ್ರಮಾಣಪತ್ರ ಸಲ್ಲಿಸುವ ಕಾಲಕ್ಕೆ ನನ್ನ ಗಮನದಲ್ಲಿ ಇತ್ತು. ಸದರಿ ವಿಷಯವನ್ನು ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿಲ್ಲ. ಸಾಕ್ಷಿದಾರು ಹೇಳುತ್ತಾರೆ ಅಧೀಕ್ಷಕರು ಇಂಜಿಯರ್ ರವರು ನನಗೆ ಈ ಪ್ರಕರಣವನ್ನು ನನಗೆ ನೋಡಿಕೊಳ್ಳಲು ಅಧಿಕಾರ ಕೊಟ್ಟಿದ್ದಾರೆ. ಈ ರೀತಿ ಅಧಿಕಾರ ಕೊಟ್ಟ ಬಗ್ಗೆ ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆದಿಲ್ಲ. ನ್ಯಾಯಾಲಯಕ್ಕೆ ಅಧಿಕಾರ ಪತ್ರವನ್ನು ಹಾಜರುಪಡಿಸಿಲ್ಲ. ಈ ವಿಷಯವನ್ನು ಪ್ರಮಾಣ ಪತ್ರದಲ್ಲಿ ಬರೆಯಲು ನನಗೆ ಏನೂ ತೊಂದರೆ ಇರಲಿಲ್ಲ. ಅಧಿಕಾರ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಈ ಪ್ರಕರಣದಲ್ಲಿ ಕೆಪಿಟಿಸಿಎಲ್ ಅಧೀಕ್ಷಕ ಇಂಜಿಯರ್ ರವರಿಗೆ ಪಾಟೀ ಮಾಡಿರುವುದರಿಂದ ಸದರಿಯವರು ಸಾಕ್ಷಿ ನುಡಿಯಲು ಸೂಕ್ತ ಇರುತ್ತಾರೆ ಎಂದರೆ ನನಗೆ ಅಧಿಕಾರ ನೀಡಿರುವುದರಿಂದ ನನಗೆ ಸಾಕ್ಷಿ ನುಡಿಯಲು ಹೇಳಿರುತ್ತಾರೆ.

ಕೆಪಿಟಿಸಿಎಲ್ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕು ತ್ಯಾವಣಿಗೆ ಗ್ರಾಮದಲ್ಲಿ 66 ಕೆವಿ ವಿದ್ಯುತ್ ಉಪ ಕೇಂದ್ರ ಎಂಬ ಬಗ್ಗೆ ಗೊತ್ತಿದ್ದೆ. ವಿದ್ಯುತ್ ಉಪಕೇಂದ್ರದಲ್ಲಿ ವಿದ್ಯುತ್

ಸರಬರಾಜು 11 ಕೆವಿ ಮಟ್ಟದಲ್ಲಿ, ಬೆಸ್ಕಾಗೆ ವಿತರಣೆ ಮಾಡಲು ಕೊಡುತ್ತೇವೆ. ವಿವಿಧ ಸ್ಟೇಷನ್ ನಿಂದ ಬಂದಂತಹ ವಿದ್ಯುತ್ ಅನ್ನು ವಿತರಣೆ ಮಾಡಲು ನಮ್ಮ ಸಬ್ ಸ್ಟೇಷನ್ ನಲ್ಲಿ ಅಸಿಸ್ಟೆಂಟ್ ಇಂಜಿಯರ್ ಇರುತ್ತಾರೆ ಮತ್ತು ಸಬ್ ಸ್ಟೇಷನ್ ಸಿಫ್ಟ್ ಡ್ಯೂಟಿ ನಿರಂತರವಾಗಿ 24 ಗಂಟೆ ಇದ್ದು, ನಾಲ್ಕು ಜನ ಆಫರೆಟರ್ಸ್ ಮತ್ತು 4 ಜನ ಹೆಲ್ಪರ್ಸ್ ಇರುತ್ತಾರೆ. ಅಲ್ಲಿ ನೇಮಕಗೊಂಡಿರುವಂತಹ ಕೆಲಸಗಾರರು ಕಾಂಟ್ರಾಕ್ಟರ್ ಕಡೆಯಿಂದ ಬಂದಿರುತ್ತಾರೆ. ವರ್ಷಕ್ಕೆ ನಾವು ಗುತ್ತಿಗೆಗೆ ಕೊಡುತ್ತೇವೆ ಅದರಂತೆ ಕೆಲಸಗಾರರನ್ನು ಕಾಂಟ್ರಾಕ್ಟರ್ ರವರು ನೇಮಿಸುತ್ತಾರೆ. ನಾವು ಗುತ್ತಿಗೆದಾರರಿಗೆ ಕೊಟ್ಟಿದ್ದಂತಹ ಕಾಂಟ್ರಾಕ್ಟ್ ಆಧಾರದ ಮೇಲೆ ಕೆಲಸಗಾರರು ದಿನದ 24 ಗಂಟೆಗೆ ಸಿಫ್ಟ್ ನಲ್ಲಿ ಕೆಲಸ ಮಾಡುತ್ತಾರೆ.

10. ಕೆಲಸಗಾರರು ಯಾವ ರೀತಿ ಕೆಲಸ ಮಾಡಬೇಕು, ಸೂಚನೆಗಳು, ಇತ್ಯಾದಿ ನಮ್ಮ ಅಸಿಸ್ಟೆಂಟ್ ಇಂಜಿಯರ್ ಮತ್ತು ಸೂಪರ್ ವೈಸರ್ ಮಾಡುತ್ತಾರೆ ಎಂದರೆ ನಿಜ. ಕೆಲಸಗಾರರು ಎಷ್ಟು ಅವಧಿ ಕೆಲಸ ಮಾಡಬೇಕು, ಯಾವ ರೀತಿ ಕೆಲಸ ಮಾಡಬೇಕು ಎಂಬುದನ್ನು ನಮ್ಮ ಇಲಾಖೆಯವರೆ ಸೂಚನೆ ಕೊಡುತ್ತಾರೆ ಎಂದರೆ ಎಜೆನ್ಸಿ ಕೊಟ್ಟಿದ್ದವರೆ ಮೆಂಟೆನ್ ಮಾಡಬೇಕಾಗುತ್ತದೆ. ಪಾಳಿ ಕೆಲಸಗಾರರಿಗೆ ಗುತ್ತಿಗೆದಾರರು ಸ್ಥಳದಲ್ಲಿ ಇರುವುದಿಲ್ಲ ಅದ್ದರಿಂದ ನಮ್ಮ ಅಸಿಸ್ಟೆಂಟ್ ಇಂಜಿನಿಯರ್ ಮತ್ತು ಸೂಪರ್ ವೈಸರ್ ರವರು ಸೂಚನೆಗಳನ್ನು ನೀಡುತ್ತಾರೆ ಎಂದರೆ ನಿಜ.

ಈ ಪ್ರಕರಣದ ಮಾಹಿತಿಯು ನನಗೆ ದಾಖಲೆ ಆಧಾರದ ಮೇಲೆ ಇರುತ್ತದೆ. ಅರ್ಜಿದಾರರು 18 ವರ್ಷಗಳಿಂದ ತ್ಯಾವಣಿಗೆ ಸ್ಟೇಷನ್ ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ ಅವರು ಗುತ್ತಿಗೆದಾರರ ಕಡೆ ಈ ಹಿಂದೆ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಮೇ 2018 ರಲ್ಲಿ ರವಿ ಯವರಿಗೆ ಕೆಲಸ ದಿಂದ ಅಕ್ರಮವಾಗಿ ಬಿಡಿಸಿರುವ ಬಗ್ಗೆ ಹೇಳಿರುತ್ತಾರೆ. ಸಾಕ್ಷಿದಾರರು ಹೇಳುತ್ತಾರೆ ಫೆಬ್ರುವರಿ 2018 ರಲ್ಲಿ ಕೆಪಿಟಿಸಿಎಲ್ ಕೆಲಸಗಾರರು ನೇಮಕ ಮಾಡಿರುವುದರಿಂದ ರವಿ ರವರಿಗೆ ಕೆಲಸದಿಂದ ಗುತ್ತಿಗೆದಾರರು ತೆಗೆದಿರುತ್ತಾರೆ. ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಫೆಬ್ರುವರಿ 2018 ರಲ್ಲಿ ಕೆಪಿಟಿಸಿಎಲ್ ನೇಮಕ ಆಗಿದ್ದರ ಬಗ್ಗೆ ಅದ್ದರಿಂದ ರವಿ ಯವರಿಗೆ ಕೆಲಸ

ದಿಂದ ಬಿಡಿಸಿದ್ದರ ಬಗ್ಗೆ ಬರೆದಿದ್ದೀರಾ ಎಂದರೆ ಅದು ಪ್ರಮಾಣ ಪತ್ರದ ಕಂಡಿಕೆ 6 ರಲ್ಲಿ ಇರುತ್ತದೆ. ಈಗ ನನಗೆ ಓದಿ ಹೇಳಿದ ಕಂಡಿಕೆ 6 ರಲ್ಲಿ ಮೇಲೆ ಹೇಳಿದ ವಿಷಯ ಇಲ್ಲ ಎಂದರೆ ಸುಳ್ಳು.

11. ಮುಖ್ಯವಿಚಾರಣೆಗೆ ಪ್ರಮಾಣ ಪತ್ರವನ್ನುಸಲ್ಲಿಸುವ ಪೂರ್ವದಲ್ಲಿ ಅರ್ಜಿದಾರರು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿದ್ದೇನೆ. ಫೆಬ್ರುವರಿ 2018 ರಲ್ಲಿ ತ್ಯಾವಣಿ ಗ್ರಾಮಕ್ಕೆ ಸಂಬಂಧಿಸಿದಂತೆ ಸಬ್ ಕಾಂಟ್ರಾಕ್ಟ್ ಅನ್ನು ಎಸ್.ಆರ್ ಎಲೆಕ್ಟ್ರಿಕಲ್ಸ್ ರವರಿಗೆ ನೀಡಲಾಗಿತ್ತು. ಆ ಸಬ್ ಕಾಂಟ್ರಾಕ್ಟ್ ನ್ನು ಫೆಬ್ರುವರಿ 2018 ಎಸ್ ಆರ್ ಎಲೆಕ್ಟ್ರಿಕಲ್ಸ್ ರವರು ನಿರ್ವಹಿಸುತ್ತಿದ್ದರು. ದಿನಾಂಕ 01.03.2018 ರಿಂದ ಆ ಸಬ್ ಕಾಂಟ್ರಾಕ್ಟ್ ಒಂದು ವರ್ಷದ ಅವಧಿಗೆ ಅನುಪವರ್ ಇಂಜಿಯರ್ಸ್ ರವರಿಗೆ ನೀಡಲಾಗಿತ್ತು. ಅರ್ಜಿದಾರರಿಗೆ ಕೆಲಸದಿಂದ ತೆಗೆಯುವ ಕಾಲಕ್ಕೆ ಸಬ್ ಕಾಂಟ್ರಾಕ್ಟ್ ಎಸ್.ಆರ್ ಪವರ್ ಎಲೆಕ್ಟ್ರಿಕಲ್ಸ್ ರವರಿಗೆ ಇತ್ತು. ದಿನಾಂಕ 01.03.2018 ರಿಂದ ಒಂದು ವರ್ಷದ ಅವಧಿಗೆ ನೀಡಿದಂತಹ ಸಬ್ ಕಾಂಟ್ರಾಕ್ಟ್ ಅನುಪವರ್ ಇಂಜಿಯರ್ಸ್ ರವರಿಗೆ ಪುನಃ ನವಿಕರಿಸಲಾಗಿದೆ. ಯಾವುದೇ ಸಬ್ ಕಾಂಟ್ರಾಕ್ಟ್ ಇದ್ದರೂ ಸಹಿತ ನೇಮಕ ಮಾಡಿಕೊಂಡಿರುವ ಕೆಲಸಗಾರರಿಗ ಕನಿಷ್ಟ ವಿದ್ಯಾರ್ಹತೆ ಇರಬೇಕು ಎಂದರೆ ನಿಜ. ಅದರಂತೆಯೆ ರವಿ ರವರಿಗೆ ಸಂಬಂಧಿಸಿದಂತೆ ವಿದ್ಯಾರ್ಹತೆ ಇದುದ್ದರಿಂದ ಅವರನ್ನು ನೇಮಕ ಮಾಡಲಾಗಿತ್ತು ಎಂದರೆ ನಿಜ.

ಈ ಹಂತದಲ್ಲಿ ವಕೀಲರು ಸಮಯ ಕೋರಿದ್ದರಿಂದ, ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.